

ಮೀರಾಬಾಯಿ ಮಂದಿರ

ಜೈನ ಮಂದಿರ





ಗೌಮುಖ ಜಲಾಶಯ



ಕುಂಭ ಶ್ಯಾಮ ಮಂದಿರ

ಸಾಕಷ್ಟು ಸಮಯವನ್ನು ಕಳೆಯುತ್ತಿದ್ದಳಂತೆ. ವಾಸ್ತು ಶಿಲ್ಪವು ಇಂಡೋ–ಆರ್ಯನ್ ಶೈಲಿಯಲ್ಲಿ ನಯನ ಮನೋಹರವಾಗಿದೆ.

**ಕಾಳಿಕಾ ಮಾತಾ ಮಂದಿರ:** 8ನೆಯ ಶತಮಾನದಲ್ಲಿ ಇದು ಮೊದಲಿಗೆ ಸೂರ್ಯ ದೇವರ ಮಂದಿರವಾಗಿತ್ತು. ನವೀಕರಿಸಿ ಕಾಳಿಕಾ ಮಂದಿರವನ್ನಾಗಿ ಮಾಡಲಾಯಿತು. ಒಂದು ದೊಡ್ಡ ಬಂಡೆಯ ಮೇಲೆ ಇದನ್ನು ಕಟ್ಟಲಾಗಿದೆ.

**ಕೀರ್ತಿ ಸ್ಥಂಭ:** ಈ ಸ್ಥಂಭವನ್ನು 12ನೆಯ ಶತಮಾನದಲ್ಲಿ ನಿರ್ಮಿಸಲಾಗಿದೆ. ಇದು ಜೈನರ ದಿಗಂಬರ ಪಂಥದವರ ಸ್ಮಾರಕ. ಒಳಗೆ ಅತೀ ಕಿರಿದಾದ 54 ಮೆಟ್ಟಿಲುಗಳಿವೆ. ಸ್ಥಂಭದ ಎತ್ತರ ಸುಮಾರು 22 ಮೀಟರ್. ರಾಜಸ್ಥಾನದಲ್ಲಿ ಜೈನ ಧರ್ಮದ ಅನುಯಾಯಿಯಾದ ರಾಜರುಗಳಿಲ್ಲದಿದ್ದರೂ, ರಜಪೂತ ರಾಜರು ಜೈನ ಧರ್ಮಕ್ಕೆ ಸಾಕಷ್ಟು ಪ್ರೊತ್ಸಾಹ ಕೊಡುತ್ತಿದ್ದರು. ಚಿತ್ತೋರಗಢ ಕೋಟೆಯೊಳಗೆ ಹಲವು ಜೈನ ಮಂದಿರಗಳಿದ್ದವು.

**ವಿಜಯ ಸ್ಥಂಭ:** ಚಿತ್ತೋರಿನ ಹೆಗ್ಗುರುತು, ವಿಜಯದ ಸಂಕೇತ. 15ನೆಯ ಶತಮಾನದಲ್ಲಿ ಮಹರಾಣಾ ಕುಂಭನು ಮೊಹಮ್ಮದ್ ಶಾಹ 1 ಖಿಲ್ಜಿ ಜತೆಗಿನ ಯುದ್ಧದಲ್ಲಿ ವಿಜಯಿಯಾದಾಗ ಕಟ್ಟಿಸಿದ ಸ್ಮಾರಕವಿದು. ಸ್ಥಂಭವು 37 ಮೀಟರ್ ಎತ್ತರವಿದ್ದು ಒಂಭತ್ತು ಮಾಳಿಗೆಯಿದೆ, 8 ಮಾಳಿಗೆಯವರೆಗೂ ಕಿರಿದಾದ ಮೆಟ್ಟಿಲುಗಳ ದಾರಿಯಿದೆ, ಮೇಲಿನಿಂದ ಚಿತ್ತೋರಿನ ಮತ್ತು ಸುತ್ತಮುತ್ತಲಿನ ದೃಶ್ಯ ಅತ್ಯಂತ ಸುಂದರವಾಗಿ ಕಾಣಿಸುತ್ತದೆ.

**ಗೌಮುಖ ಜಲಾಶಯ:** ಕಡಿದಾದ ಬೆಟ್ಟದ ಬುಡದಲ್ಲಿ ಹಸುವಿನ ಬಾಯಿ ಆಕಾರದಲ್ಲಿರುವ ಈ ಜಲಾಶಯವು ಶತ್ರುಗಳು ಮುತ್ತಿಗೆ ಹಾಕಿದಾಗ ಕೋಟೆಯೊಳಗಿನ ಪ್ರಜೆಗಳಿಗೆ ನೀರಿನ ಆಶ್ರಯವಾಗಿತ್ತು. ಈಗಲೂ ಸಾಕಷ್ಟು ನೀರಿದೆ.

ಚಿತ್ತೋರಗಢಗೆ ಭೇಟಿ ನೀಡಲು ಅಕ್ಟೋಬರ್‌ನಿಂದ ಫೆಬ್ರವರಿಯ ಅಂತ್ಯದವರೆಗೆ ಉತ್ತಮ ಸಮಯ, ಆದರೆ ಡಿಸೆಂಬರ್ ಮತ್ತು ಜನವರಿಯಲ್ಲಿ ಚಳಿಯು ಸಾಕಷ್ಟು ತೀವ್ರವಾಗಿರುವುದರಿಂದ ಬೆಚ್ಚಗಿನ ಉಡುಪು ಬೇಕು.